ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY
ಯರಗೇರಾ-೫೮೪೧೩೩, ರಾಯಚೂರು, ಕರ್ನಾಟಕರಾಜ್ಯ, ಭಾರತ
ಆಡಳಿತ ವಿಭಾಗ

ಸಂಖ್ಯೆ: ರಾವಿರಾ/ಆಡಳಿತ/ವಿದ್ಯಾವಿಷಯಕ ಪರಿಷತ್ ಸಭೆ/ಸಾಮಾನ್ಯ/2024-25/985 ದಿನಾಂಕ: 18.10.2024

**ವಿದ್ಯಾವಿಷಯಕ ಪರಿಷತ್‌ನ ಸಾಮಾನ್ಯ ಸಭೆಯ ಸೂಚನಾ ಪತ್ರ**

ವಿಷಯ: ದಿನಾಂಕ: 24.10.2024 ರಂದು ಗುರುವಾರ ಬೆಳಿಗ್ಗೆ 11:30 ಗಂಟೆಗೆ ವಿದ್ಯಾವಿಷಯಕ ಪರಿಷತ್‌ನ ಸಾಮಾನ್ಯ ಸಭೆಯನ್ನು ಜರುಗಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 15.10.2024

*****

ರಾಯಚೂರು ವಿಶ್ವವಿದ್ಯಾಲಯದ ಕುಲಪತಿಗಳ ಟಿಪ್ಪಣಿ ಮೇರೆಗೆ ವಿದ್ಯಾವಿಷಯಕ ಪರಿಷತ್‌ನ ಸಾಮಾನ್ಯ ಸಭೆಯನ್ನು **ದಿನಾಂಕ: 24.10.2024 ರಂದು ಗುರುವಾರ ಬೆಳಿಗ್ಗೆ 11.30 ಗಂಟೆಗೆ ವಿಶ್ವವಿದ್ಯಾಲಯದ ಆಡಳಿತ ಕಛೇರಿಯಲ್ಲಿ ಆಯೋಜಿಸಲಾಗಿದೆ.** ಕಾರಣ, ತಾವು ಈ ಸಭೆಗೆ ಆಗಮಿಸಬೇಕಾಗಿ ಕೋರಲಾಗಿದೆ.

**ಸಾಮಾನ್ಯ ಸಭೆಯ ಕಾರ್ಯಸೂಚಿ**

1. ದಿನಾಂಕ: 11.07.2024 ರಂದು ನಡೆದ ವಿದ್ಯಾವಿಷಯಕ ಪರಿಷತ್‌ನ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಕುರಿತು.

2. ರಾಯಚೂರು ವಿಶ್ವವಿದ್ಯಾಲಯದ ಪಿಎಚ್.ಡಿ ಪದವಿಗೆ ಸಂಬಂದಿಸಿದ ಮಾನದಂಡಗಳು ಹಾಗೂ ಕಾರ್ಯವಿಧಾನಗಳ ನಿರ್ವಹಣೆಗೆ ಸಂಬಂಧಿಸಿದ ಕರಡು ವಿನಿಯಮಗಳಿಗೆ ಅನುಮೋದನೆ ನೀಡುವ ಕುರಿತು (Approval of draft " Raichur University Regulations Governing the Minimum Standards and Procedures for the award of Degree of Doctor of Philosophy (Ph.D)"

3. ರಾಯಚೂರು ವಿಶ್ವವಿದ್ಯಾಲಯದ Draft approval of Statute Governing the Conferring of Honorary Doctorate Degrees During Annual Convocation ಅನುಮೋದನೆ ಕುರಿತು ಚರ್ಚೆ.

4. ರಾಯಚೂರು ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಸಂಯೋಜಿತ ಕಾಲೇಜುಗಳ 2025-26ನೇ ಸಾಲಿನ ಸಂಯೋಜನಾ ಪ್ರಕ್ರಿಯೆಯ ವೇಳಾಪಟ್ಟಿ ಕುರಿತು ಚರ್ಚೆ

5. ಅಧ್ಯಕ್ಷರ ಅನುಮತಿಯ ಮೇರೆಗೆ ಇತರ ವಿಷಯಗಳ ಚರ್ಚೆ

**(ಮಾನ್ಯ ಕುಲಸಚಿವರಿಂದ ಕರಡು ಪ್ರತಿ ಅನುಮೋದನೆಗೊಂಡಿದೆ)**

ತಮ್ಮ ವಿಶ್ವಾಸಿ,

ಉಪ ಕುಲಸಚಿವರು

ಇವರಿಗೆ,

1. ಸಭೆಯ ಅಧ್ಯಕ್ಷರಿಗೆ
2. ರಾಯಚೂರು ವಿಶ್ವವಿದ್ಯಾಲಯದ ಎಲ್ಲಾ ವಿದ್ಯಾವಿಷಯಕ ಪರಿಷತ್‌ನ ಸದಸ್ಯರುಗಳಿಗೆ.

ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY
ಯರಗೇರಾ-೫೮೪೧೩೩, ರಾಯಚೂರು, ಕರ್ನಾಟಕರಾಜ್ಯ, ಭಾರತ
ಆಡಳಿತ ವಿಭಾಗ

---

ಪ್ರತಿಗಳನ್ನು ಮಾಹಿತಿಗಾಗಿ,

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು-560 001.
2) ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001.
3) ಕುಲಸಚಿವರು (ಮೌಲ್ಯಮಾಪನ), ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
4) ಹಣಕಾಸು ಅಧಿಕಾರಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
5) ಗ್ರಂಥಪಾಲಕರು, ರಾಯಚೂರು ವಿಶ್ವವಿದ್ಯಾಲಯ,ರಾಯಚೂರು
6) ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ರಾಯಚೂರು ವಿಶ್ವವಿದ್ಯಾಲಯ,ರಾಯಚೂರು
7) ಉಪ ಕುಲಸಚಿವರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
8) ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
9) ಕಛೇರಿ ಪ್ರತಿ.

## ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು.

ದಿನಾಂಕ: 24.10.2024 ರಂದು ಮುಂಜಾನೆ 11.30 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ನಡೆದ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು.

### ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು:

1. ಪ್ರೊ. ಹರೀಶ ರಾಮಸ್ವಾಮಿ, ಮಾನ್ಯ ಕುಲಪತಿಗಳು – ಅಧ್ಯಕ್ಷರು
2. ಪ್ರೊ. ಪಾರ್ವತಿ. ಸಿ.ಎಸ್ – ಸದಸ್ಯರು
3. ಪ್ರೊ. ಪಿ. ಭಾಸ್ಕರ್ – ಸದಸ್ಯರು
4. ಡಾ. ಎ.ಆರ್. ಪುರವಂತ, – ಸದಸ್ಯರು
5. ಶ್ರೀ. ಶಿವಪ್ರಸಾದ ರಾವ್ – ಸದಸ್ಯರು
6. ಶ್ರೀ. ಎನ್. ಸತೀಶ, – ಸದಸ್ಯರು
7. ಶ್ರೀ. ಕಿಶನ್ ರಾಥೋಡ – ಸದಸ್ಯರು
8. ಡಾ. ಮಲ್ಲಿಕಾರ್ಜುನ ಎಂ. ಕುಲಕರ್ಣಿ, – ಸದಸ್ಯರು
9. ಶ್ರೀ. ಮೊಹ್ಮದ್ ಮುಜಾಕೀರ್ ಅಲಿ, – ಸದಸ್ಯರು
10. ಪ್ರೊ. ಯರಿಸ್ವಾಮಿ, ಕುಲಸಚಿವರು (ಮೌಲ್ಯಮಾಪನ) – ಸದಸ್ಯರು
11. ಡಾ. ರಾಘವೇಂದ್ರ ಫತ್ತೇಪೂರು, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ – ಸದಸ್ಯರು
12. ಡಾ. ಜಿ.ಎಸ್. ಬಿರಾದಾರ, ಗ್ರಂಥಪಾಲಕರು – ಸದಸ್ಯರು
13. ಡಾ. ಶಂಕರ. ವ್ಹಿ ಕುಲಸಚಿವರು – ಸದಸ್ಯ ಕಾರ್ಯದರ್ಶಿಗಳು

ಮೊದಲನೇಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಸಭೆಗೆ ಆಗಮಿಸಿದ ವಿದ್ಯಾವಿಷಯಕ ಪರಿಷತ್ ಸದಸ್ಯರುಗಳನ್ನು ಸ್ವಾಗತಿಸಿ, ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವದರೊಂದಿಗೆ ಸಭೆಯು ಪ್ರಾರಂಭವಾಗುತ್ತದೆ.

| ಕಲಂ/ ಐಟಂ | ವಿಷಯ | ವಿದ್ಯಾವಿಷಯಕ ಪರಿಷತ್‌ನ ನಿರ್ಣಯ |
|---|---|---|
| 1 | ದಿನಾಂಕ: 11.07.2024 ರಂದು ಜರುಗಿದ ಸಾಮಾನ್ಯ ವಿದ್ಯಾವಿಷಯಕ ಪರಿಷತ್‌ನ ಸಾಮಾನ್ಯ ಸಭೆಯ ನಡವಳಿಗಳನ್ನು ಧೃಡಿಕರಿಸುವ ಕುರಿತು. | ದಿನಾಂಕ: 11.07.2024 ರಂದು ಜರುಗಿದ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡವಳಿಗಳನ್ನು ಎಲ್ಲರ ಗಮನಕ್ಕೆ ತರುವ ಕುರಿತು ಓದಲಾಯಿತು ಹಾಗೂ ಸಭೆಯ ನಡಾವಳಿಗಳನ್ನು ಸರ್ವಾನುಮತದಿಂದ ದೃಢೀಕರಿಸಲಾಯಿತು. |
| 2 | ರಾಯಚೂರು ವಿಶ್ವವಿದ್ಯಾಲಯದ ಪಿ.ಎಚ್.ಡಿ ಪದವಿಗೆ ಸಂಬಂಧಿಸಿದ ಮಾನದಂಡಗಳು ಹಾಗೂ ಕಾರ್ಯವಿಧಾನಗಳ ನಿರ್ವಹಣೆಗೆ ಸಂಬಂಧಿಸಿದ ಕರಡು ವಿನಿಯಮಗಳಿಗೆ ಅನುಮೋದನೆ ನೀಡುವ ಕುರಿತು. (Approval of draft "Raichur University Regulations Governing the Minimum Standards and Procedures for the award of Degree of Doctor of Philosophy (Ph.D)" | ರಾಯಚೂರು ವಿಶ್ವವಿದ್ಯಾಲಯದ ಪಿ.ಎಚ್.ಡಿ ಪದವಿಗೆ ಸಂಬಂಧಿಸಿದ ಮಾನದಂಡಗಳು ಹಾಗೂ ಕಾರ್ಯವಿಧಾನಗಳ ನಿರ್ವಹಣೆಗೆ ಸಂಬಂಧಿಸಿದ ಯು.ಜಿ.ಸಿ ಆಧಾರಿತ ಕರಡು ನಿಯಮಾವಳಿಗಳನ್ನು (Draft copy of "Raichur University Regulations Governing the Minimum Standards and Procedures for the award of Degree of Doctor of Philosophy" (Ph.D)) ಮಂಡಿಸಿದ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಸರ್ವಾನುಮತದಿಂದ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಸರ್ಕಾರದ ಹಾಗೂ ಕುಲಾಧಿಪತಿಯವರ ಒಪ್ಪಿಗೆಗೆ ಕಳುಹಿಸಿಕೊಡಲು ಒಪ್ಪಲಾಯಿತು. |

| | | |
|---|---|---|
| 3 | ರಾಯಚೂರು ವಿಶ್ವವಿದ್ಯಾಲಯದ Draft approval of Statute Governing the Conferring of Honorary Doctorate Degrees During Annual Convocation ಅನುಮೋದನೆ ಕುರಿತು ಚರ್ಚೆ. | ರಾಯಚೂರು ವಿಶ್ವವಿದ್ಯಾಲಯದ Draft Draft copy of Statute Governing the Conferring of Honorary Doctorate Degrees During Annual Convocation ಅನುಮೋದನೆ ಕುರಿತು ಚರ್ಚಿಸಿ ಮುಂದಿನ ಕ್ರಮಕ್ಕಾಗಿ ಸರ್ಕಾರದ ಹಾಗೂ ಕುಲಾಧಿಪತಿಯವರ ಒಪ್ಪಿಗೆಗೆ ಕಳುಹಿಸಿಕೊಡಲು ಒಪ್ಪಲಾಯಿತು. |
| 4 | ರಾಯಚೂರು ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಸಂಯೋಜಿತ ಕಾಲೇಜುಗಳ 2025–26 ನೇ ಸಾಲಿನ ಸಂಯೋಜನಾ ಪ್ರಕ್ರಿಯೆಯ ವೇಳಾಪಟ್ಟಿ ಕುರಿತು ಚರ್ಚೆ. | ರಾಯಚೂರು ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಸಂಯೋಜಿತ ಕಾಲೇಜುಗಳ 2025–26 ನೇ ಸಾಲಿನ ಸಂಯೋಜನಾ ಪ್ರಕ್ರಿಯೆಯನ್ನು ಸರ್ಕಾರಿ ಆದೇಶ ಸಂ: ಇಡಿ 212 ಯುಎನ್‌ಇ 2024 ಬೆಂಗಳೂರು ದಿನಾಂಕ: 04.10.2024 ರಂತೆ ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಸ್ನಾತಕ, ಸ್ನಾತಕೋತ್ತರ ಕೋರ್ಸ್‌ಗಳ ಹಾಗೂ ಸ್ನಾತಕೋತ್ತರ ಡಿಪ್ಲೋಮಾ ಕೋರ್ಸುಗಳಿಗೆ ಸಂಯೋಜನೆ ಪ್ರಕ್ರಿಯೆಯ ವೇಳಾಪಟ್ಟಿಯ ಕುರಿತು ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕರಾದ ಡಾ. ರಾಘವೇಂದ್ರ ಫತ್ತೆಪೂರರವರು ವಿವರಣೆಯನ್ನು ನೀಡಿದರು. ನಂತರದಲ್ಲಿ ಸಭೆಯು ವೇಳಾಪಟ್ಟಿಯನ್ನು ಕುರಿತು ಧೀರ್ಘವಾಗಿ ಚರ್ಚಿಸಿ ಸರ್ವಾನುಮತದಿಂದ ಸಭೆಯು ಈ ವೇಳಾಪಟ್ಟಿಗೆ ತನ್ನ ಒಪ್ಪಿಗೆಯನ್ನು ಸೂಚಿಸಿತು. |
| 5 | ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳ ಚರ್ಚೆ. | ಅಧ್ಯಕ್ಷರ ಅನುಮತಿಯ ಮೇರೆಗೆ ಮಾನ್ಯ ಕುಲಸಚಿವರು ತಾವು ಹಿಂದಿನ (20.10.2024 ರಿಂದ 24.10.2024 ರವರೆಗೆ) ನಾಲ್ಕು ದಿನಗಳ ಕಾಲ ಕುಲಸಚಿವರು (ಮೌಲ್ಯಮಾಪನ), ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕರ ಜೊತೆ ರಾಯಚೂರು ಹಾಗೂ ಯಾದಗಿರಿ ಕಾಲೇಜುಗಳನ್ನು ಭೇಟಿ ಮಾಡಿದ ವಿಡಿಯೋಗಳನ್ನು ಪ್ರದರ್ಶಿಸಿ, ಕಾಲೇಜುಗಳ ಸಂಯೋಜನೆ ಕುರಿತು ಶೇ 45 ರ ಕೆಳಗೆ ಬರುವ ಕಾಲೇಜುಗಳ ಬಗ್ಗೆ ಇರುವ ಗಂಭೀರತೆಯನ್ನು ವಿವರಿಸಿ ಮುಂದೆ ವಿಶ್ವವಿದ್ಯಾಲಯವು ಈ ವಿಚಾರದಲ್ಲಿ ತೀರ್ವತರಹದ ನಿರ್ಧಾರ ತೆಗೆದುಕೊಳ್ಳುವುದಾಗಿ ತಿಳಿಸಿ, ಕಾಲೇಜುಗಳು ತಮ್ಮ ಸಂಯೋಜನೆಯನ್ನು ಮುಂದುವರೆಯಲು ಗುಣಾತ್ಮಕವಾಗಿ ಬೆಳೆಯಬೇಕೆಂದು ತಿಳಿಸಿದ ಮಾತಿಗೆ ಸರ್ವಾನುಮತದಿಂದದ ಸಭೆಯು ಒಪ್ಪಿಗೆಯನ್ನು ಸೂಚಿಸಿತು. |

24/10/2024

**ಕುಲಸಚಿವರು**
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು

24.10.2024

**ಕುಲಪತಿಗಳು**
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು